

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ಮತ್ತು

# ಪ್ರಶ್ನೆ ಪತ್ರಿಕೆ


–:ರಚನೆ :–

**ರವೀಶ್ ಕುಮಾರ್ ಬಿ.**

ನಿವೃತ್ತ ಕನ್ನಡ ಭಾಷಾ ಶಿಕ್ಷಕರು
ರಾಜ್ಯ ಸಂಪನ್ಮೂಲ ವ್ಯಕ್ತಿ (ಕನ್ನಡ)
ಮೈಸೂರು – 570033
ಸಂಚಾರಿ ವಾಣಿ ಸಂಖ್ಯೆ : 9448958498

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

## ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 5 |
| 6 | ಪ್ರಶ್ನೆ ಪತ್ರಿಕೆ | 6 | 9 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 10 | 18 |

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 14 |
| 2 | ಗ್ರಹಿಕೆ | 36 | 36 | 19 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಕಿರು ಉತ್ತರ – 1 | 07 | 07 | 07 |
| 3 | ಕಿರು ಉತ್ತರ – 2 | 20 | 20 | 10 |
| 4 | ದೀರ್ಘ ಉತ್ತರ – 1 | 33 | 33 | 11 |
| 5 | ದೀರ್ಘ ಉತ್ತರ – 2 | 20 | 20 | 05 |
| 6 | ದೀರ್ಘ ಉತ್ತರ – 3 | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 30 | |
| 2 | ಸಾಧಾರಣ | 50 | 50 | |
| 3 | ಕಠಿಣ | 20 | 20 | |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಗದ್ಯ ಒಟ್ಟು | 28 | 28 | 13 |
| 2 | ಪದ್ಯ ಒಟ್ಟು | 30 | 30 | 11 |
| 3 | ಪಠ್ಯಪೋಷಕ ಅಧ್ಯಯನ | 09 | 09 | 05 |
| 4 | ಅಪಠಿತ ಗದ್ಯ | 04 | 04 | 01 |
| 5 | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ರಾಮರಾಜ್ಯ | 08 |
| 2 | ಬೆಡಗಿನ ತಾಣ ಜಯಪುರ | 08 |
| 3 | ನಾನು ಕಂಡಂತೆ ಡಾ. ಬಿ. ಜಿ. ಎಲ್. ಸ್ವಾಮಿ | 06 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | 06 |
|  | ಗದ್ಯ ಒಟ್ಟು | 28 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಹೊಸಹಾಡು | 08 |
| 2 | ಪಾರಿವಾಳ | 07 |
| 3 | ಸಿರಿಯನಿನ್ನೇನ ಬಣ್ಣಿಪೆನು | 08 |
| 4 | ಬಲಿಯನಿತ್ತೊಡೆ ಮುನಿವೆಂ | 07 |
|  | ಪದ್ಯ ಒಟ್ಟು | 30 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು |
|---|---|---|
| 1 | ಗುಣಸಾಗರಿ ಪಂಢರೀಬಾಯಿ | 04 |
| 2 | ಹೊಳೆ ಬಾಗಿಲು | 03 |
| 2 | ನನ್ನಾಸೆ | 02 |
|  | ಪದ್ಯ ಒಟ್ಟು | 09 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು |
|---|---|---|
| 1 | ಅಪಠಿತ ಗದ್ಯ | 04 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ವ್ಯಾಕರಣಾಂಶಗಳು | 10 |
| 2 | ಅಲಂಕಾರ | 03 |
| 3 | ಛಂದಸ್ಸು | 03 |
| 4 | ಗಾದೆ ವಿಸ್ತರಣೆ | 03 |
| 5 | ಪತ್ರಲೇಖನ | 05 |
| 6 | ಪ್ರಬಂಧ ಲೇಖನ | 05 |
|  | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 |

## ಹಂತ : 5(ಎ). ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ರಾಮರಾಜ್ಯ | ** | 1(1) | 1(3) | ** | ** | ** | 2(2) | ** | ** | ** | ** | ** | ** | ** | ** | 1(1) | 2(2) | 1(3) | ** | ** | 08 | 04 |
| 2 | ಬೆಡಗಿನ ತಾಣ ಜಯಪುರ | ** | 1(1) | ** | ** | ** | ** | ** | ** | ** | ** | 1(3) | 1(4) | ** | ** | ** | 1(1) | ** | 1(3) | 1(4) | ** | 08 | 03 |
| 3 | ನಾನು ಕಂಡಂತೆ ಡಾ. ಬಿ. ಜಿ. ಎಲ್. ಸ್ವಾಮಿ | ** | 1(1) | ** | ** | ** | ** | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | ** | ** | ** | ** | ** | 1(1) | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| | **ಗದ್ಯ ಒಟ್ಟು** | ** | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಹೊಸಹಾಡು | ** | 1(1) | ** | 1(4) | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | 1(4) | ** | 08 | 03 |
| 2 | ಪಾರಿವಾಳ | ** | ** | 1(3) | ** | ** | ** | ** | ** | ** | ** | ** | ** | ** | 1(4) | ** | ** | ** | 1(3) | 1(4) | ** | 07 | 02 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | 1(1) | 2(2) | ** | ** | ** | 1(3) | ** | ** | ** | ** | 1(1) | 2(2) | 1(3) | ** | ** | 08 | 04 |
| 4 | ಬಲಿಯನಿತ್ತೊಡೆ ಮುನಿವೆಂ | ** | ** | ** | ** | ** | ** | ** | ** | ** | ** | 1(3) | 1(4) | ** | ** | ** | ** | ** | 1(3) | 1(4) | ** | 07 | 02 |
| | **ಪದ್ಯ ಒಟ್ಟು** | ** | **1(1)** | **1(3)** | **1(4)** | ** | 1(1) | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಗುಣಸಾಗರಿ ಪಂಢರೀಬಾಯಿ | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| 2 | ಹೊಳೆಬಾಗಿಲು | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 3 | ನನ್ನಾಸೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | ** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **06(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ಒಟ್ಟು** | **06(1)** | ** | ** | ** | **4(1)** | ** | ** | **3(3)** | ** | ** | 1(3) | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **06(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **21 – 14** | | | | **36 – 19** | | | | | **39 – 11** | | | | **4 – 1** | **100 – 45** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 03–00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 * 1 = 6**

**1.** ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
(ಎ) ಒಂದೊಂದು (ಬಿ) ಕೃಶವಾಗಿತ್ತು (ಸಿ) ಬಣ್ಣಗೆಟ್ಟಿತು (ಡಿ) ಬುದ್ಧಿಶಾಲಿಯಾದ

**2.** 'ಶ್ರೀಮದ್ವಾಲ್ಮೀಕಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
(ಎ) ಸವರ್ಣದೀರ್ಘ (ಬಿ) ಜಶ್ತ್ವ (ಸಿ) ವೃದ್ಧಿ (ಡಿ) ಯಣ್

**3.** ಇವುಗಳಲ್ಲಿ ಅನುಸ್ವಾರಾಕ್ಷರದಿಂದ ಕೂಡಿದ ಪದವಿದು;
(ಎ) ಮಂದಿರ (ಬಿ) ಮನಃ (ಸಿ) ಮಹತ್ತ್ವ (ಡಿ) ವಿಜ್ಞಾನ

**4.** 'ಕ್ಷೇತ್ರಗಳಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು;
(ಎ) ಚತುರ್ಥೀ (ಬಿ) ಪಂಚಮೀ (ಸಿ) ಷಷ್ಠೀ (ಡಿ) ಸಪ್ತಮೀ

**5.** 'ಹಣೆಗಣ್ಣ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
(ಎ) ಬಹುವ್ರೀಹಿ (ಬಿ) ಕರ್ಮಧಾರಯ (ಸಿ) ತತ್ಪುರುಷ (ಡಿ) ದ್ವಂದ್ವ

**6.** ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ;
(ಎ) 32 (ಬಿ) 12 (ಸಿ) 20 (ಡಿ) 64

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 * 1 = 4**

**7.** ಅಂಬುಜ : ತಾವರೆ : : ನೀಲಾಂಬುಜ : ______________________

**8.** ಧ್ವನಿ : ದನಿ : ಯುಗ : : ______________________

**9.** ಸ್ವರಗಳು : 13 : : ವ್ಯಂಜನಗಳು : ________________

**10.** ಮೊಟ್ಟಮೊದಲು : ದ್ವಿರುಕ್ತಿ : : ಮೇಲುಕೀಳು : __________________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

**11.** ಯಾರೊಡನೆ ಸಮಾಲೋಚಿಸುವುದು ರಾಜದೋಷ ಎಂದು ರಾಮನು ಹೇಳುತ್ತಾನೆ?

**12.** ಜಯಪುರದ ಪೂರ್ವದ ರಾಜಧಾನಿ ಯಾವುದು?

**13.** ಡಾ. ಬಿ. ಜಿ. ಎಲ್. ಸ್ವಾಮಿ ಅವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?

**14.** ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತದೆ?

**15.** ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಕಡಿದೊಗೆಯಬೇಕಾದ ಪಾಶಗಳು ಯಾವುವು?

**16.** ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು ಎಂದು ಕವಿ ವರ್ಣಿಸುತ್ತಾನೆ?

**17.** ಲಾಂಚು ತನ್ನ ಪಯಣ ಮುಗಿಸಿದಾಗ ಜನರು ಹೇಗೆ ಹೊರಡುತ್ತಾರೆ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

**18.** 'ರಾಮರಾಜ್ಯ' ಪಾಠದ ಪ್ರಕಾರ ದೂತನು ಹೇಗಿರಬೇಕು?

**19.** ರಾಜನು ಖಜಾನೆಯನ್ನು ಹೇಗೆ ನಿಭಾಯಿಸಬೇಕು ಎಂದು ರಾಮನು ಹೇಳುತ್ತಾನೆ?

**20.** ಡಾ. ಬಿ. ಜಿ. ಎಲ್ ಸ್ವಾಮಿ ಅವರ ಸಂಶೋಧನೆಯ ಆಸಕ್ತಿಯು ಹೇಗಿತ್ತು?

**21.** ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?

**22.** ಕವಿ ರತ್ನಾಕರವರ್ಣಿಯು ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಬಯಸುವನು?

**23.** ಭರತ ಚಕ್ರವರ್ತಿಯು ಓಲಗ ಮಂಟಪವನ್ನೇರಿದ ಸಂದರ್ಭವನ್ನು ಕವಿ ಜನ್ನನು ಹೇಗೆ ಬಣ್ಣಿಸಿದ್ದಾನೆ?

**24.** ರಂಗರಾವ್ ಅವರು ಮಗಳ ಹೆಸರನ್ನು ಪಂಢರೀಬಾಯಿ ಎಂದು ಬದಲಾಯಿಸಲು ಕಾರಣವೇನು?

**25.** ಪಂಢರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?

**26.** ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಜನರ ಗಡಿಬಿಡಿ ಹೇಗಿರುತ್ತದೆ?

**27.** 'ನನ್ನಾಸೆ' ಕವನದಲ್ಲಿ ಕವಯಿತ್ರಿ ಅವರ ಆಸೆಗಳೇನು?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **2 * 3 = 6**

**28.** ಎನ್. ರಂಗನಾಥ ಶರ್ಮಾ

**29.** ಸು. ರಂ. ಎಕ್ಕುಂಡಿ

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 * 3 = 3**

**30.** ಆನಭಯರುಚಿ ಕುಮಾರನೆ
ಈ ನೆಗೞ್ದಿರ್ದಭಯಮತಿಯುಮೀ ಅಕ್ಕನೆ ದಲ್ ।

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

**31.** ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 * 3 = 3**

**32.** ತುಂಬಿದ ಕೊಡ ತುಳುಕುವುದಿಲ್ಲ
ಅಥವಾ
ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

**33.** "ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು"
**34.** "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"
**35.** "ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ"
**36.** "ಚಂದಿರನೋ ಭಾಸ್ಕರನೋಯೆಂಬಂತೆ"
**37.** "ಬಲಿಯನಿತ್ತೊಡೆ ಮುನಿವೆಂ"
**38.** "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 * 4 = 4**

**39.** ನವಭಾವ ________________
________________________
________________________
________________ ಧ್ವನಿಯೇರಬೇಕು
ಅಥವಾ
ಉನ್ನತೋನ್ನತ ________________
________________________
________________________
________________ ಬೆನ್ನಟ್ಟಬೇಕು

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1 * 4 = 4**

**40.** ಕುರುಡು ವಾತ್ಸಲ್ಯದಲಿ ಕಳೆದುಕೊಂಡು ವಿವೇಕ
ಬಲೆಗೆ ನುಗ್ಗಿದ ಪಾರಿವಾಳ ಹಿಂಡು
ಹಸಿದ ಬೇಡನು ನಡೆದ ಹೊತ್ತುಕೊಂಡು ॥
ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ
ವ್ಯಾಮೋಹವನು ತೊರೆದು ಬಾಳಬೇಕು
ಏನು ಬಂದರು ಕೂಡ ತಾಳಬೇಕು ॥

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

**41.** ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿಸಿ.
ಅಥವಾ
ಜಂತ್ರಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

**42.** ಮಾರಿದತ್ತ ರಾಜ್ಯವನ್ನು ತ್ಯಜಿಸಲು ಕಾರಣವೇನು?
ಅಥವಾ
ಅಭಯರುಚಿ ಮತ್ತು ಮಾರಿದತ್ತರಲ್ಲಿ ಯಾರನ್ನು ಮೆಚ್ಚುವಿರಿ? ಏಕೆ?

**43. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01*04 =04 (2+2)**

ಬಸವಣ್ಣನವರು ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದರು. ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಮನಗಂಡು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚಗನ್ನಡದಲ್ಲಿ ತಿಳಿಸಿಕೊಟ್ಟರು. ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಿಲ್ಲ, ಒಂದು ವರ್ಗದ ಸ್ವತ್ತಲ್ಲ. ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು ಆಗಿತ್ತು.

ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ, ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ವ್ಯಾಖ್ಯಾನಿಸಿದರು. 'ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ.

**ಪ್ರಶ್ನೆಗಳು :**

ಅ) ಧರ್ಮದ ಬಗೆಗೆ ಬಸವಣ್ಣನವರ ನಿಲುವು ಏನಾಗಿತ್ತು?

ಬ) ಬಸವಣ್ಣನವರು ಏಕೆ ಒಬ್ಬ ಕ್ರಾಂತಿಕಾರಿ ಎನಿಸಿಕೊಂಡಿದ್ದಾರೆ?

**44.** ನಿಮ್ಮನ್ನು ರಾಮನಗರ ಜಿಲ್ಲೆಯ ಹೆಬ್ಬಕೋಡಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವೀರೇಶ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಶೌಚಾಲಯವನ್ನು ನಿರ್ಮಿಸಲು ಅಗತ್ಯ ನೆರವು ನೀಡುವಂತೆ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ. 1 * 5 = 5

ಅಥವಾ

ನಿಮ್ಮನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೀಲಾಂಬಿಕೆ' ಎಂದು ಭಾವಿಸಿಕೊಂಡು, ವಿಜಯ ನಗರ ಜಿಲ್ಲೆಯ ಹೂವಿನ ಹಡಗಲಿ ನಿವಾಸಿಯಾದ ನಿಮ್ಮ ಗೆಳತಿ 'ಗಂಗಾಬಿಕೆ' ಎಂಬುವವಳನ್ನು ನಿಮ್ಮ ಶಾಲೆಯಲ್ಲಿ ನಡೆಯುವ ಕ್ರೀಡೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

**45. ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 * 5 = 5**

- ನಿರುದ್ಯೋಗ ಸಮಸ್ಯೆ
- ಬಾಲಕಾರ್ಮಿಕ ಪದ್ಧತಿ ನಿರ್ಮೂಲನ ಕಾರ್ಯಕ್ರಮದ ಮಹತ್ತ್ವ

---- 0 ----

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 9 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ** ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6 * 1 = 6**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

**1.** ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
(ಎ) ಒಂದೊಂದು (ಬಿ) ಕೃಶವಾಗಿತ್ತು (ಸಿ) ಬಣ್ಣಗೆಟ್ಟಿತು (ಡಿ) ಬುದ್ಧಿಶಾಲಿಯಾದ
**ಉತ್ತರ : (ಸಿ) ಬಣ್ಣಗೆಟ್ಟಿತು**

**2.** 'ಶ್ರೀಮದ್ವಾಲ್ಮೀಕಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
(ಎ) ಸವರ್ಣದೀರ್ಘ (ಬಿ) ಜಶ್ತ್ವ (ಸಿ) ವೃದ್ಧಿ (ಡಿ) ಯಣ್
**ಉತ್ತರ : (ಬಿ) ಜಶ್ತ್ವ**

**3.** ಇವುಗಳಲ್ಲಿ ಅನುಸ್ವಾರಾಕ್ಷರದಿಂದ ಕೂಡಿದ ಪದವಿದು;
(ಎ) ಮಂದಿರ (ಬಿ) ಮನಃ (ಸಿ) ಮಹತ್ತ್ವ (ಡಿ) ವಿಜ್ಞಾನ
**ಉತ್ತರ : (ಎ) ಮಂದಿರ**

**4.** 'ಕ್ಷೇತ್ರಗಳಲ್ಲಿ' ಪದದಲ್ಲಿರುವ ವಿಭಕ್ತಿಯ ಹೆಸರು;
(ಎ) ಚತುರ್ಥೀ (ಬಿ) ಪಂಚಮೀ (ಸಿ) ಷಷ್ಠೀ (ಡಿ) ಸಪ್ತಮೀ
**ಉತ್ತರ : (ಡಿ) ಸಪ್ತಮೀ**

**5.** 'ಹಣೆಗಣ್ಣ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
(ಎ) ಬಹುವ್ರೀಹಿ (ಬಿ) ಕರ್ಮಧಾರಯ (ಸಿ) ತತ್ಪುರುಷ (ಡಿ) ದ್ವಂದ್ವ
**ಉತ್ತರ : (ಎ) ಬಹುವ್ರೀಹಿ**

**6.** ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ;
(ಎ) 32 (ಬಿ) 12 (ಸಿ) 20 (ಡಿ) 64
**ಉತ್ತರ : (ಡಿ) 64**

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4 * 1 = 4**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

**7.** ಅಂಬುಜ : ತಾವರೆ : : ನೀಲಾಂಬುಜ : **ನೈದಿಲೆ**
**8.** ಧ್ವನಿ : ದನಿ : ಯುಗ : : **ಜುಗ**
**9.** ಸ್ವರಗಳು : 13 : : ವ್ಯಂಜನಗಳು : **34**
**10.** ಮೊಟ್ಟಮೊದಲು : ದ್ವಿರುಕ್ತಿ : : ಮೇಲುಕೀಳು : **ಜೋಡುನುಡಿ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

**11. ಯಾರೊಡನೆ ಸಮಾಲೋಚಿಸುವುದು ರಾಜದೋಷ ಎಂದು ರಾಮನು ಹೇಳುತ್ತಾನೆ?**
ಅನುಭವವಿಲ್ಲದ ಅವಿವೇಕಿಗಳೊಡನೆ ಸಮಾಲೋಚಿಸುವುದು ರಾಜದೋಷ ಎಂದು ರಾಮನು ಹೇಳುತ್ತಾನೆ.

**12. ಜಯಪುರದ ಪೂರ್ವದ ರಾಜಧಾನಿ ಯಾವುದು?**
ಜಯಪುರದ ಪೂರ್ವದ ರಾಜಧಾನಿ **ಅಂಬೇರ.**

**13. ಡಾ. ಬಿ. ಜಿ. ಎಲ್. ಸ್ವಾಮಿ ಅವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು?**
ಡಾ. ಬಿ. ಜಿ. ಎಲ್. ಸ್ವಾಮಿ ಅವರು ನುಡಿಸುತ್ತಿದ್ದ ಸಂಗೀತವಾದ್ಯ ಪಿಟೀಲು.

**14. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತದೆ?**
ರಾಧಾಕೃಷ್ಣನ್ ಅವರ ಜನ್ಮ ದಿನವನ್ನು **'ರಾಷ್ಟ್ರೀಯ ಶಿಕ್ಷಕರ ದಿನಾಚರಣೆ'** ಎಂದು ಆಚರಿಸಲಾಗುತ್ತದೆ.

**15. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಕಡಿದೊಗೆಯಬೇಕಾದ ಪಾಶಗಳು ಯಾವುವು?**
ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಕಡಿದೊಗೆಯಬೇಕಾದ ಪಾಶಗಳು ಜಾತಿ, ಕುಲ, ಮತ ಧರ್ಮಗಳು.

**16. ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು ಎಂದು ಕವಿ ವರ್ಣಿಸುತ್ತಾನೆ?**
ಆಸ್ಥಾನ ಭವನದೊಳಗೆ ರಾಜನು **ಸ್ವರ್ಗಕ್ಕೆ ಒಡೆಯನಾದ ದೇವೇಂದ್ರನಂತೆ** ಶೋಭಿಸುವನು **ಎಂದು ಕವಿ ವರ್ಣಿಸುತ್ತಾನೆ.**

**17. ಲಾಂಚು ತನ್ನ ಪಯಣ ಮುಗಿಸಿದಾಗ ಜನರು ಹೇಗೆ ಹೊರಡುತ್ತಾರೆ?**
ಲಾಂಚು ತನ್ನ ಪಯಣ ಮುಗಿಸಿದಾಗ ಜನರು ಆಚೆ ದಡಕ್ಕೆ ಜಿಗಿದು ಹೊರಡುತ್ತಾರೆ. ಬಸ್ಸು, ಕಾರು, ಬೈಕುಗಳು ಬುರಬುರನೆ ದಡ ಸೇರುತ್ತವೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

**18. 'ರಾಮರಾಜ್ಯ' ಪಾಠದ ಪ್ರಕಾರ ದೂತನು ಹೇಗಿರಬೇಕು?**
'ರಾಮರಾಜ್ಯ' ಪಾಠದಲ್ಲಿ "ದೂತನು ದೇಶದಲ್ಲಿಯೇ ಹುಟ್ಟಿ ಬೆಳೆದ ವಿದ್ವಾಂಸನಾಗಿರಬೇಕು. ದೂತನು ಕಾರ್ಯಸಮರ್ಥನೂ ಪ್ರತಿಭಾಶಾಲಿಯೂ ಆಗಿರಬೇಕು. ರಾಜನು ಹೇಳಿ ಕಳುಹಿಸಿದ ಸಂದೇಶವನ್ನಷ್ಟೇ ತಿಳಿಸುವ ಸತ್ಯವಂತನಾಗಿರಬೇಕು. ವ್ಯಕ್ತಿ, ವಸ್ತುಗಳ ಮೌಲ್ಯವನ್ನೂ ಯೋಗ್ಯತೆಯನ್ನೂ ಸರಿಯಾಗಿ ಗುರುತಿಸಬಲ್ಲ ನಿಷ್ಣಾತನಾಗಿರಬೇಕು. ದೂತನಾದವನು ಈ ಎಲ್ಲಾ ಗುಣಗಳನ್ನು ಹೊಂದಿರಬೇಕು" ಎಂದು ರಾಮನು ಹೇಳುತ್ತಾನೆ.

**19. ರಾಜನು ಖಜಾನೆಯನ್ನು ಹೇಗೆ ನಿಭಾಯಿಸಬೇಕು ಎಂದು ರಾಮನು ಹೇಳುತ್ತಾನೆ?**
"ರಾಜನಾದವನು ರಾಜ್ಯದ ಆದಾಯವು ವ್ಯಯಕ್ಕಿಂತ ಹೆಚ್ಚಾಗಿರುವಂತೆ ಜಾಗ್ರತೆ ವಹಿಸಬೇಕು. ರಾಜ್ಯದ ಬೊಕ್ಕಸದಲ್ಲಿ ಸಂಗ್ರಹಿಸುವ ಸಂಪತ್ತೆಲ್ಲವೂ ರಾಜ್ಯದ ಅಭಿವೃದ್ಧಿಯ ಕೆಲಸ ಕಾರ್ಯಗಳಿಗೆ ವಿನಿಯೋಗಿಸಬೇಕು. ಖಜಾನೆಯನ್ನು ಬರಿದುಗೊಳಿಸಬಾರದು. ಆದರೆ ಅನರ್ಥ, ಅನ್ಯಾಯಗಳ ಮಾರ್ಗವನ್ನು ಹಿಡಿದು ಖಜಾನೆಯನ್ನು ತುಳುಕಿಸುವಷ್ಟು ತುಂಬಿಸಿಕೊಳ್ಳಬಾರದು. ಹೀಗೆ ಖಜಾನೆಯನ್ನು ನಿಭಾಯಿಸಬೇಕು" ಎಂದು ರಾಮನು ಹೇಳುತ್ತಾನೆ.

**20. ಡಾ. ಬಿ. ಜಿ. ಎಲ್ ಸ್ವಾಮಿ ಅವರ ಸಂಶೋಧನೆಯ ಆಸಕ್ತಿಯು ಹೇಗಿತ್ತು?**
ಸಸ್ಯಶಾಸ್ತ್ರ ವಿಷಯದ ಸಂಶೋಧಕರಾದ ಡಾ. ಬಿ. ಜಿ. ಎಲ್ ಸ್ವಾಮಿ ಅವರಿಗೆ ಸಸ್ಯಗಳ ಬಗೆಗಿನ ಸಂಶೋಧನೆಯ ಆಸಕ್ತಿ ಬಹಳ ಹೆಚ್ಚಾಗಿತ್ತು. ಸಸ್ಯದ ಕಾಂಡ, ನರರಚನೆಗಳಲ್ಲಿರುವ ವಿನ್ಯಾಸಗಳನ್ನು ತಕ್ಷಣ ಗ್ರಹಿಸುವ ಕಲ್ಪನಾಶಕ್ತಿ ಅವರಿಗಿತ್ತು. ಪಿಟೀಲು ನುಡಿಸುವಾಗಲೂ ಸಹ ಅವರು ಹುಡುಕುತ್ತಿದ್ದುದು ಶಬ್ದಗಳ ರಚನಾವೈಖರಿಯನ್ನು, ಅಂಥ ರಚನೆಗಳ ಸಾಧ್ಯತೆಯನ್ನು ಚಿತ್ರಕಲೆಯಲ್ಲೂ ಅರಸುತ್ತಿದ್ದರು. ಸ್ವಾಮಿಯವರು ಚಿಕ್ಕಮಕ್ಕಳಿಗೆ ಸಹಜವೆನ್ನಿಸುವ ಕೌತುಕವನ್ನು ಕಣ್ಣುಗಳಲ್ಲಿ ಸೂಸುತ್ತಿದ್ದರು. ಸಸ್ಯ ಮತ್ತು ವನಗಳನ್ನು ಅವರೆಂದೂ ಒಣಸಂಶೋಧಕನಾಗಿ ನೋಡುತ್ತಿರಲಿಲ್ಲ. ಕಲೆಯ ರಸ, ಆನಂದ ಮತ್ತು ಕೌತುಕಗಳು ಅವರ ಸಂಶೋಧನೆಯ ಇನ್ನೊಂದು ಮುಖವಾಗಿರುತ್ತಿತ್ತು. ಇತಿಹಾಸ, ಸಾಹಿತ್ಯ ಇತರ ಲಲಿತಕಲೆಗಳಲ್ಲೂ ಅವರ ಸಂಶೋಧಕ ಬುದ್ಧಿ ಕೆಲಸ ಮಾಡುತ್ತಲೇ ಇತ್ತು.

**21. ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?**
ರಷ್ಯಾ ದೇಶದ ಅಧ್ಯಕ್ಷರಾದ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ "ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು. ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ. ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚು ಕಾಲ ಬಾಳಬೇಕೆಂಬುದೇ ನನ್ನಾಸೆ. ನಾನು ಹೆಚ್ಚು ಕಾಲ ಬಾಳುವುದಿಲ್ಲ" ಎಂದು ಹೇಳಿದರು. ಅಷ್ಟೇ ಅಲ್ಲ "ಅಶೋಕನು ಕಳಿಂಗ ಯುದ್ಧದ ಆನಂತರ ಶ್ರೇಷ್ಠ ಮನುಷ್ಯನಾದಂತೆ ಆಗುವಿರಿ" ಎಂದು ತಮ್ಮ ಪ್ರಥಮ ಭೇಟಿಯಲ್ಲಿ ರಾಧಾಕೃಷ್ಣನ್ ಹೇಳಿದ ಮಾತನ್ನು ಸ್ಮರಿಸಿಕೊಂಡರು.

**22. ಕವಿ ರತ್ನಾಕರವರ್ಣಿಯು ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಬಯಸುವನು?**
"ಕನ್ನಡಿಗರು 'ಅಯ್ಯಾ ನಿನ್ನ ಕೃತಿ ಚೆನ್ನಾಗಿದೆ' ಎನ್ನಬೇಕು. ತೆಲುಗರು 'ರಯ್ಯಾ ಮಂಚಿದಿ' ಎಂದೆನ್ನಬೇಕು. ತುಳುವರು ಸಂತೋಷದಿಂದ 'ಅಯ್ಯಾ ಎಂಚ ಪೋರ್ಲಾಂಡ್' ಎಂದು ಹೇಳಬೇಕು. ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೊಗಳಬೇಕು" ಎಂದು **ಕವಿ ರತ್ನಾಕರವರ್ಣಿಯು** ಬಯಸುವನು.

**23. ಭರತ ಚಕ್ರವರ್ತಿಯು ಓಲಗ ಮಂಟಪವನ್ನೇರಿದ ಸಂದರ್ಭವನ್ನು ಕವಿ ರತ್ನಾಕರವರ್ಣಿಯು ಹೇಗೆ ಬಣ್ಣಿಸಿದ್ದಾನೆ?**
"ಭರತ ಚಕ್ರವರ್ತಿಯು ಒಂದು ದಿನ ಉದಯಕಾಲದಲ್ಲಿ ಎದ್ದು, ದೇವಾಲಯಕ್ಕೆ ತೆರಳಿ, ದೇವರ ಅರ್ಚನೆ ಮಾಡಿದನು. ನಂತರ ಸಭಾಮಂಟಪಕ್ಕೆ ಬಂದನು. ರತ್ನಖಚಿತ ಚಿನ್ನದಿಂದ ನಿರ್ಮಿತವಾದ ಸಿಂಹಾಸನವನ್ನು ಏರಿ ಕುಳಿತು ಶೋಭಾಯಮಾನವಾಗಿ ಪ್ರಕಾಶಿಸುತ್ತಿದ್ದನು" ಎಂದು ಕವಿ ರತ್ನಾಕರವರ್ಣಿಯು ಭರತ ಚಕ್ರವರ್ತಿ ಓಲಗ ಮಂಟಪವನ್ನೇರಿದ ಸಂದರ್ಭವನ್ನು ವಿವರಿಸುತ್ತಾನೆ.

**24. ರಂಗರಾವ್ ಅವರು ಮಗಳ ಹೆಸರನ್ನು ಪಂಢರೀಬಾಯಿ ಎಂದು ಬದಲಾಯಿಸಲು ಕಾರಣವೇನು?**
ರಂಗರಾವ್ ಅವರು ಪಂಡರಾಪುರದ ಪಂಡರೀನಾಥನಲ್ಲಿ ಅತೀವ ಶ್ರದ್ಧೆ ಮತ್ತು ಭಕ್ತಿಗಳನ್ನು ಹೊಂದಿದ್ದ ಕಾರಣದಿಂದ ಅವರು ತಮ್ಮ ಮಗಳ ಹೆಸರನ್ನು ಪಂಢರೀಬಾಯಿ ಎಂದು ಬದಲಾಯಿಸಿದರು.

**25. ಪಂಢರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?**

ಪಂಢರೀಬಾಯಿ ಅವರ ಅಣ್ಣ ವಿಮಲಾನಂದ ಅವರು ನಡೆಸುತ್ತಿದ್ದ ನಾಟಕ ಕಂಪನಿಯ ಕಲಾವಿದೆಯೊಬ್ಬಳು ನಾಟಕ ಪ್ರಾರಂಭವಾಗುವುದಕ್ಕೆ ಅರ್ಧಗಂಟೆ ಬಾಕಿ ಇರುವಾಗ ಬರುವುದಿಲ್ಲ ಎಂದು ಹೇಳಿದ ಕಾರಣದಿಂದ ನಾಟಕದಲ್ಲಿ ಬಣ್ಣ ಹಚ್ಚಬೇಕಾಯಿತು.

**26. ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಜನರ ಗಡಿಬಿಡಿ ಹೇಗಿರುತ್ತದೆ?**

ಲಾಂಚು ಹೊಳೆಯ ದಡಕ್ಕೆ ಬಂದು ನಿಂತಾಗ ಮೊದಲ ಸಲ ಲಾಂಚು ಹತ್ತುವವರ ಸಂಭ್ರಮ, ಕುತೂಹಲಗಳು ಹೇಳತೀರದು. ಲಾಂಚು ಬಂದು ನಿಂತ ಕೂಡಲೇ ಮೊದಲು ಜನರೆಲ್ಲ ಓಡಿಹೋಗಿ ಹತ್ತುತ್ತಾರೆ. ಆಮೇಲೆ ವಾಹನಗಳೆಲ್ಲ ಒಂದೊಂದಾಗಿ ಬರುತ್ತವೆ. ಎಲ್ಲಾ ವಾಹನಗಳೂ ಹಿಡಿಸುವುದಿಲ್ಲ; ಉಳಿದ ವಾಹನಗಳು ಮುಂದಿನ ಟ್ರಿಪ್ಪಿನವರೆಗೂ ಕಾಯಬೇಕು. ಲಾಂಚಿಗೆ ಬಂದವನು ಬೈಕಿನಲ್ಲೇ ಬಂದಿದ್ದರೂ ಓಡಿ ಬಂದು ಬಸ್ಸು ಹತ್ತಿದವನಂತೆ ಏದುಸಿರು ಬಿಡುತ್ತಾನೆ.

**27. 'ನನ್ನಾಸೆ' ಕವನದಲ್ಲಿ ಕವಯಿತ್ರಿ ಅವರ ಆಸೆಗಳೇನು?**

ತನ್ನನ್ನೇ ಸುಟ್ಟು ಬೆಳಕು ನೀಡುವ ಬತ್ತಿ, ಪುಣ್ಯವಂತರಿಗೆ ನೆರಳಾಗುವ ಮರ, ದಾಹಗೊಂಡವರ ತಣಿಸುವ ನೀರಿನ ಚಿಲುಮೆ, ಅಳುವ ಕಂದನ ನಗಿಸುವ ಅಮ್ಮನ ಕಂಠದ ಜೋಗುಳ, ಮಾನವನ ಅಜ್ಞಾನವನ್ನು ತೊಲಗಿಸುವ ವಾಗ್ದೇವಿಯ ಕೈಯ ಗ್ರಂಥ, ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು, ದೇಹವು ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ಆಗಬೇಕು ಎಂಬುದು ಕವಯಿತ್ರಿ ಅವರ ಆಸೆಗಳಾಗಿವೆ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 2 * 3 = 6**

| | |
|---|---|
| **ಸ್ಥಳ,** | **1 ಅಂಕ** |
| **ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿ ಒಟ್ಟು** | **3 ಅಂಕಗಳು** |

**28. ಎನ್. ರಂಗನಾಥ ಶರ್ಮಾ**

ಮಹಾಮಹೋಪಾಧ್ಯಾಯ ವಿದ್ವಾನ್ ಡಾ. ಎನ್. ರಂಗನಾಥ ಶರ್ಮಾ ಅವರು ಕ್ರಿ. ಶ. 1916 (07–01–1916)ರಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ನಡಹಳ್ಳಿ ಎಂಬಲ್ಲಿ ಜನಿಸಿದರು. ಇವರು ಏಕಚಕ್ರಂ, ಬಾಹುಬಲಿವಿಜಯಂ, ಗುರುಪಾರಮಿತ್ರಚರಿತಂ, ಗೊಮ್ಮಟೇಶ ಪಂಚಕಂ ಮೊದಲಾದ ಕೃತಿಗಳನ್ನು ಸಂಸ್ಕೃತದಲ್ಲಿ ಬರೆದು ಪ್ರಕಟಿಸಿದ್ದಾರೆ. ಇವರು ಭಾಷಾಂತರಪಥ, ಲೌಕಿಕ ನ್ಯಾಯಗಳು, ಸೂಕ್ತಿವ್ಯಾಪ್ತಿ, ಉಪನಿಷತ್ ಕಥೆಗಳು, ವಾಲ್ಮೀಕಿ ಮುನಿಗಳ ಹಾಸ್ಯಪ್ರವೃತ್ತಿ ಎನ್ನುವ ಮೊದಲಾದ ಕೃತಿಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇವರು ವಾಲ್ಮೀಕಿ ರಾಮಾಯಣ, ಅಮರಕೋಶ, ವಿದುರನೀತಿ, ಶ್ರೀಮದ್ಭಾಗವತದ ದಶಮಸ್ಕಂದ, ವಾಕ್ಯಪದೀಯದ ಬ್ರಹ್ಮಕಾಂಡ, ವಿದ್ಯಾರಣ್ಯರ ಪಂಚದಶಿ ಮೊದಲಾದ ಸಂಸ್ಕೃತ ಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರಿಗೆ ರಾಷ್ಟ್ರಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ತಿರುಪತಿಯ ಸಂಸ್ಕೃತ ವಿಶ್ವವಿದ್ಯಾಲಯದ ಮಹಾಮಹೋಪಧ್ಯಾಯ ಗೌರವ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಆದಿಚುಂಚನಗಿರಿ ಮಹಾಸಂಸ್ಥಾನವು ಕೊಡಮಾಡುವ ಚುಂಚಶ್ರೀ ಪ್ರಶಸ್ತಿ, ರಾಷ್ಟ್ರಪತಿಗಳ ಗೌರವ ಪ್ರಶಸ್ತಿಪತ್ರ ಮೊದಲಾದ ಹಲವು ಪ್ರಶಸ್ತಿಗಳು ಸಂದಿವೆ.

**29. ಸು. ರಂ. ಎಕ್ಕುಂಡಿ**

**ಶ್ರೀ ಸುಬ್ಬಣ್ಣ ರಂಗನಾಥ ಎಕ್ಕುಂಡಿ** (ಸು. ರಂ. ಎಕ್ಕುಂಡಿ) ಅವರು **ಕ್ರಿ. ಶ. 1923 ರಲ್ಲಿ** ಹಾವೇರಿ ಜಿಲ್ಲೆಯ **ರಾಣಿಬೆನ್ನೂರಿನಲ್ಲಿ** ಜನಿಸಿದರು. ಇವರು ಸಮಗ್ರ ಕಥನ ಕವನಗಳು, ಶ್ರೀ ಆನಂದತೀರ್ಥರು, ಸಂತಾಪ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬಕುಳದ ಹೂಗಳು ಎಂಬ ಕವನ ಸಂಕಲನಗಳನ್ನು, 'ನೆರಳು' ಎಂಬ ಕಥಾ ಸಂಕಲವನ್ನು, 'ಪ್ರತಿಬಿಂಬಗಳು' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಶ್ರೀಯುತರಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 * 3 = 3**

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**30. ಅನಭಯರುಚಿ ಕುಮಾರನೆ**

**ಈ ನೆಗಟ್ಟಿರ್ದಭಯಮತಿಯುಮೀ ಅಕ್ಕನೆ ದಲ್ ।**

| | | |
|---|---|---|
| 4 | 4 | 4 |
| — ᴗᴗ | ᴗ ᴗᴗ ᴗ | — ᴗᴗ |
| ಆನಭ | ಯರುಚಿ ಕು | ಮಾರನೆ |

| | | | | |
|---|---|---|---|---|
| 4 | 4 | 4 | 4 | 4 |
| — ᴗᴗ | —ᴗ ᴗ | ᴗ ᴗᴗ ᴗ | — — | ᴗᴗ — |
| **ಈ ನೆಗ** | **ಟ್ದಿರ್ದಭ** | ಯಮತಿಯು | ಮೀ ಅ | ಕ್ಕನೆ ದಲ್ |

ಈ ಮೇಲಿನ ಪದ್ಯವು ಮಾತ್ರಾಗಣದ **'ಕಂದ ಪದ್ಯ'**ದಲ್ಲಿ ರಚಿತವಾಗಿದೆ.

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**31. ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು.**

ಅಲಂಕಾರ : ಉಪಮಾಲಂಕಾರ
ಲಕ್ಷಣ : ಎರಡು ವಸ್ತುಗಳಿಗೆ ಇರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.
ಉಪಮೇಯ : ಬಾನಿನಲ್ಲಿನ ಗಾಳಿಪಟಗಳು
ಉಪಮಾನ : ಹಕ್ಕಿಗಳು
ಉಪಮಾವಾಚಕ : ಅಂತೆ
ಸಮಾನಧರ್ಮ : ಹಾರಾಡುವುದು
ಸಮನ್ವಯ : ಉಪಮೇಯವಾದ ಬಾನಿನಲ್ಲಿನ ಗಾಳಿಪಟಗಳನ್ನು ಉಪಮಾನವಾದ ಹಕ್ಕಿಗಳಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಈ ವಾಕ್ಯವು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.**

**32. ತುಂಬಿದ ಕೊಡ ತುಳುಕುವುದಿಲ್ಲ**

**ಅಥವಾ**

**ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಸ್ವಾರಸ್ಯ : ಅಂತರಾರ್ಥ – ಭಾಷೆ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**33. "ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು"**

**ಆಯ್ಕೆ :** ಈ ವಾಕ್ಯವನ್ನು ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥ ಶರ್ಮಾ ಅವರು ಅನುವಾದಿಸಿರುವ **'ಶ್ರೀಮದ್ವಾಲ್ಮೀಕಿ ರಾಮಾಯಣಮ್'** ಕೃತಿಯಿಂದ ಆಯ್ದ **'ರಾಮರಾಜ್ಯ'** ಎನ್ನುವ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ಭರತನಿಗೆ ರಾಜ್ಯಾಡಳಿತದ ವಿಷಯದಲ್ಲಿ ಉಪದೇಶವನ್ನು ಮಾಡುವ ಸಂದರ್ಭದಲ್ಲಿ ಈ ಮಾತನ್ನು ರಾಮನು ಹೇಳುತ್ತಾನೆ.

**ಸ್ವಾರಸ್ಯ :** "ಪಂಡಿತನಾದವನು ರಾಜನ ಕಷ್ಟಕಾಲದಲ್ಲಿ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ಯಶಸ್ವಿಗೊಳಿಸಬಲ್ಲನು. ಆದ್ದರಿಂದ ರಾಜನು ಪಂಡಿತರನ್ನು ಗೌರವಿಸಬೇಕು" ಎನ್ನುವುದನ್ನು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**34. “ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ”**

**ಆಯ್ಕೆ :–** ಈ ವಾಕ್ಯವನ್ನು ಶ್ರೀಮತಿ **ರತ್ನಮ್ಮ** ಅವರ **‘ಡಾ. ಎಸ್. ರಾಧಾಕೃಷ್ಣನ್ – ಜೀವನ ಸಾಧನೆ’ ಹಾಗೂ ಎ. ಎನ್. ಮೂರ್ತಿರಾವ್ ಅವರ ‘ಚಿತ್ರಗಳು–ಪತ್ರಗಳು** ಕೃತಿಗಳಿಂದ ಆಯ್ದು, ಪಠ್ಯ ಪುಸ್ತಕ ಸಮಿತಿ ಅವರು ರಚಿಸಿದ **‘ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣನ್’** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ ಹೇಳುತ್ತಾರೆ.

**ಸ್ವಾರಸ್ಯ :–** ರಾಧಾಕೃಷ್ಣನ್ ಅವರಲ್ಲಿ ಇದ್ದ ಮಾನವತೆಯ ಪ್ರೇಮ ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**35. “ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ”**

**ಆಯ್ಕೆ :** ಈ ವಾಕ್ಯವನ್ನು ಎಸ್. ಎಲ್. ಭೈರಪ್ಪ ಅವರು ರಚಿಸಿರುವ **‘ನಾನು ಕಂಡಂತೆ ಡಾ. ಬಿ. ಜಿ. ಎಲ್. ಸ್ವಾಮಿ’** ಎನ್ನುವ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಲೇಖಕರು ಸ್ವಾಮಿ ಅವರನ್ನು ನೋಡಲು ಅವರು ತಂಗಿದ್ದ ಮೈಸೂರಿನ ಗಂಗೋತ್ರಿಯ ಅತಿಥಿಗೃಹಕ್ಕೆ ಹೋದಾಗ, ಸ್ವಾಮಿ ಅವರು ಏಕಾಗ್ರತೆಯಿಂದ ಪಿಟೀಲು ನುಡಿಸುವುದರಲ್ಲಿ ಹೊಸಹೊಸದನ್ನು ಸೃಷ್ಟಿಸಲು ಪ್ರಯೋಗ ಮಾಡುತ್ತಿದ್ದನ್ನು ಗಮನಿಸಿ, ಅರ್ಧಗಂಟೆಗೂ ಮಿಕ್ಕಿ ಬಾಗಿಲಬಳಿ ನಿಂತು ಕಾಯುತ್ತಿದ್ದು, ನಂತರ ಒಳಗೆ ಹೋದ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** “ಏಕಾಗ್ರತೆಯಿಂದ ಅಭ್ಯಾಸ ಮಾಡುವ ಯಾರಿಗೂ ಅಡ್ಡಿಯನ್ನುಂಟು ಮಾಡಬಾರದು; ಅವರ ಖಾಸಗಿತನಕ್ಕೆ ಭಂಗ ತರಬಾರದು” ಎನ್ನುವುದು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತವಾಗಿದೆ.

**36. “ಚಂದಿರನೋ ಭಾಸ್ಕರನೋಯೆಂಬಂತೆ”**

**ಆಯ್ಕೆ :– ಈ** ವಾಕ್ಯವನ್ನು **ತ. ಸು. ಶಾಮರಾಯ ಅವರು** ಸಂಪಾದಿಸಿರುವ **ಶ್ರೀ ರತ್ನಾಕರವರ್ಣಿ** ಅವರು ರಚಿಸಿರುವ **‘ಭರತೇಶ ವೈಭವ’** ಕೃತಿಯಿಂದ ಆಯ್ದ **‘ಸಿರಿಯನಿನ್ನೇನ ಬಣ್ಣಿಪೆನು’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** “ಛತ್ರ ಚಾಮರಗಳ ಸಾಲಿನಲ್ಲಿ ಭರತ ಚಕ್ರವರ್ತಿ ಪ್ರಕಾಶಮಾನವಾಗಿ ರಾರಾಜಿಸುತ್ತಿದ್ದನು” ಎಂದು ಎಂದು ಕವಿಯು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** “ಮೋಡದ ಮರೆಯಲ್ಲಿ ಶೋಭಿಸುವ ಸೂರ್ಯಚಂದ್ರರಂತೆ ಭರತಚಕ್ರವರ್ತಿ ಶೋಭಿಸುತ್ತಿದ್ದನು” ಎಂದು ಕವಿಯು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**37. “ಬಲಿಯನಿತ್ತೊಡೆ ಮುನಿವೆಂ”**

**ಆಯ್ಕೆ :** ಈ ವಾಕ್ಯವನ್ನು ಶ್ರೀ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರು ಸಂಪಾದಿಸಿರುವ **ಶ್ರೀ ಜನ್ನಕವಿ** ಅವರು ರಚಿಸಿರುವ **‘ಯಶೋಧರ ಚರಿತೆ’** ಕಾವ್ಯದಿಂದ ಆಯ್ದ **‘ಬಲಿಯನಿತ್ತೊಡೆ ಮುನಿವೆಂ’** ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಚಂಡಮಾರಿಯು ಪ್ರತ್ಯಕ್ಷಳಾಗಿ “ ಪ್ರಜೆಗಳೆಲ್ಲರೂ ನನ್ನನ್ನು ಜಲ, ಗಂಧ, ಹೂಮಾಲೆ, ಅಕ್ಕಿ, ಧೂಪ, ದೀಪ, ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ. ಚಂಡಮಾರಿಯು ಪ್ರಜೆಗಳೆಲ್ಲರಿಗೂ ಹೇಳುತ್ತಾಳೆ.

**ಸ್ವಾರಸ್ಯ :** ದೇವರಿಗೆ ಪೂಜೆಯನ್ನು ಮಾಡುವ ನೆಪದಲ್ಲಿ ಪ್ರಾಣಿಬಲಿ ನೀಡಿ, ಪ್ರಾಣಿಹಿಂಸೆ ಮಾಡುವುದು ತಪ್ಪು, ಇದನ್ನು ದೇವರು ಸಹ ಒಪ್ಪುವುದಿಲ್ಲ ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**38. “ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು”**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **‘ಶತಮಾನದ ಗಾನ’** ಕೃತಿಯಿಂದ ಆಯ್ದ **‘ಹೊಸಹಾಡು’ ಎಂಬ** ಕವನದಿಂದ ಆರಿಸಲಾಗಿದೆ.

**ಸಂದರ್ಭ :–** “ಸೋಮಾರಿತನ ಮತ್ತು ನಿದ್ದೆಯಿಂದ ಎಚ್ಚರಗೊಳ್ಳಬೇಕು. ವೀರತನದ ಹಾಡು ಆಕಾಶ ಭೂಮಿಗಳಲ್ಲಿ ಮೊಳಗಬೇಕು. ನಡೆನುಡಿಗಳಲ್ಲಿ ಕ್ರಾಂತಿಕಿಡಿ ಕೆರಳಬೇಕು” ಎಂದು ಕವಿಗಳು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** “ಲೋಕದ ಜನರಲ್ಲಿ ‘ನಡೆಗೆ ತಕ್ಕ ನುಡಿ; ನುಡಿಗೆ ತಕ್ಕ ನಡೆ’ ಇರುವ ಕ್ರಾಂತಿಕಾರಕ ಮನೋಭಾವ ಚಿಮ್ಮಬೇಕು” ಎಂಬುದನ್ನು ಕವಿಗಳು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾರೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4 * 1 = 4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ)**

**39.** ನವಭಾವ–ನವಜೀವನ–ನವಶಕ್ತಿ ತುಂಬಿಸುವ
**ಹಾಡೊಮ್ಮೆ ಹಾಡಬೇಕು;**
**ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ**
ವೀರಧ್ವನಿಯೇರಬೇಕು;

ಅಥವಾ

ಉನ್ನತೋನ್ನತ **ಘನಹಿಮಾದ್ರಿ ಶಿಖರವನೇರಿ**
**ಹಾಡಲ್ಲಿ ಹಾಡಬೇಕು;**
**ಹಾಡು ನುಡಿಗುಂಡುಗಳು ಹಾರಿ ದಶದಿಕ್ಕಿನಲಿ**
**ಭಯದ** ಬೆನ್ನಟ್ಟಬೇಕು;

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **4 * 1 = 4**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **3. ಅಂಕಗಳು** |
| **ಒಟ್ಟು** | **4. ಅಂಕಗಳು** |

**40. ಕುರುಡು ವಾತ್ಸಲ್ಯದಲಿ ಕಳೆದುಕೊಂಡು ವಿವೇಕ**
**ಬಲೆಗೆ ನುಗ್ಗಿದ ಪಾರಿವಾಳ ಹಿಂಡು**
**ಹಸಿದ ಬೇಡನು ನಡೆದ ಹೊತ್ತುಕೊಂಡು ॥**
**ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ**
**ವ್ಯಾಮೋಹವನು ತೊರೆದು ಬಾಳಬೇಕು**
**ಏನು ಬಂದರು ಕೂಡ ತಾಳಬೇಕು ॥**

ಈ ಪದ್ಯಭಾಗವನ್ನು **ಸು. ರಂ. ಎಕ್ಕುಂಡಿ** ಅವರ **'ಸಮಗ್ರ ಕಥನ ಕವನಗಳು'** ಕೃತಿಯಿಂದ ಆಯ್ದ **'ಪಾರಿವಾಳ'** ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದ ಪಾರಿವಾಳಗಳ ಸಂಸಾರ ಕುರುಡು ವಾತ್ಸಲ್ಯದಿಂದ ಬೇಡ ಬೀಸಿದ ಬಲೆಗೆ ಬೀಳುತ್ತದೆ. ಆ ಸಂದರ್ಭದಲ್ಲಿ ಕವಿಗಳು **"ಜೀವನದಲ್ಲಿ ಮೋಹಕ್ಕೆ ಒಳಗಾದಾಗ ಅದು ನಮ್ಮನ್ನು ಸರ್ವನಾಶದೆಡೆಗೆ ಕೊಂಡೊಯ್ಯುತ್ತದೆ"** ಎಂದು ಹೇಳುತ್ತಾರೆ.

ಕುರುಡು ವಾತ್ಸಲ್ಯದಿಂದ ವಿವೇಕವನ್ನು ಕಳೆದುಕೊಂಡ ಪಾರಿವಾಳಗಳು ಬೇಡನು ಹಾಕಿದ್ದ ಬಲೆಗೆ ಸಿಲುಕಿದವು. ಹಸಿದ ಬೇಡನು ಬಲೆಯಲ್ಲಿ ಸಿಲುಕಿದ ಪಾರಿವಾಳಗಳ ಹಿಂಡನ್ನು ಹೊತ್ತುಕೊಂಡು ಮನೆಯ ಕಡೆಗೆ ನಡೆದನು. ಮೋಹದಿಂದ ಕೂಡಿದ ಬುದ್ಧಿಯಿಂದ ಸರ್ವನಾಶವಾಗುವುದು ಖಂಡಿತ. ಆದ್ದರಿಂದ ನಾವು ವ್ಯಾಮೋಹವನ್ನು ತೊರೆದು ಬಾಳಬೇಕು. ಎಷ್ಟೇ ಕಷ್ಟ ಬಂದರೂ ತಾಳ್ಮೆಯಿಂದ ಯೋಚಿಸಿ ನಿರ್ಧಾರವನ್ನು ಕೈಗೊಳ್ಳಬೇಕು.

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **3 ಅಂಕಗಳು** |

**41. ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿಸಿ.**

ಜಯಪುರದ ಅಂಬೇರ ಬೆಟ್ಟದ ಅರಮನೆಯ ಮೊದಲ ಅಂತಸ್ತಿನಲ್ಲಿರುವ ಪುಟ್ಟ ದೇವಾಲಯವು ಚಿತ್ರ ಕೆಲಸಗಳಿಂದ ಕೂಡಿದ್ದು, ಗೋಡೆಗಳೂ, ನೆಲವೂ, ಸ್ತಂಭಗಳೂ, ಸಹ ಹಾಲುಗಲ್ಲಿನ ರಚನೆಯಿಂದ ಕೂಡಿದೆ. ಈ ದೇವಾಲಯವು ಚಿಕ್ಕದಾದರೂ ಶಾಂತವಾಗಿ ಕಾಣಿಸುವ ಮಂದಿರವಾಗಿದೆ. ಅರಮನೆಯ ಎರಡನೇ ಅಂತಸ್ತಿನಲ್ಲಿರುವ ದೊಡ್ಡದೊಂದು ಸಭಾಂಗಣವು ವಿಶಾಲವಾದ ಹಾಲುಗಲ್ಲಿನ ರಚನೆಯಾಗಿದೆ. ಸಭಾಂಗಣದಲ್ಲಿನ ಚಾವಣಿಯು ರಜಪುತಾನದ ಶೈಲಿಯ ಕಮಾನು ಮತ್ತು ಕಂಬಗಳು ತುಂಬ ಲಲಿತವಾಗಿದ್ದು, ಪರಸ್ಪರ ಹೊಂದಿಕೊಂಡು, ಈ ರಚನೆಗೆ ಚೆಲುವನ್ನು ನೀಡಿವೆ. ಅದರ ಎದುರಿಗೆ ಇರುವ ಅಂಗಣವೂ ಸಾಕಷ್ಟು ವಿಶಾಲವಾಗಿದೆ. ಅರಮನೆಯ ಮೂರನೆಯ ಅಂತಸ್ತಿನಲ್ಲಿ ರಾಜರ ಅಂತಃಪುರ ಹಾಗೂ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ, ಬಣ್ಣದ ಕಲ್ಲುಗಳಿಂದ ಕೊರೆದು, ತುಂಬಿಸಿದ ಲತಾಪುಷ್ಪಗಳ ಚಿತ್ರಾವಳಿಗಳಿವೆ. ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ, ಅಲಂಕರಿಸಿದಂತಹ ಕಂಬ, ಮುಚ್ಚಿಗೆಗಳುಳ್ಳ ರಚನೆಗಳು ಕತ್ತಲಿನಲ್ಲಿ ದೀವಿಗೆ ಹೊತ್ತಿಸಿದಾಗ, ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ. ಅರಮನೆಯ ಮೊದಲನೆಯ ಮಟ್ಟದಲ್ಲಿ ಒಂದು ಅಂತಃಪುರ, ಹಾಲುಗಲ್ಲಿನ ಚಾವಡಿ ಹಾಗೂ ನೀರಿನ ಕಾರಂಜಿಗಳಿವೆ; ಚಿತ್ರ ಕೊರೆದು ಮಾಡಿದ ಹಾಲುಗಲ್ಲಿನ ನೀರಕಾಲುವೆಗಳಿವೆ. ಇವೆಲ್ಲವು ರಜಪೂತ ಅರಸರ ರಸಿಕ ಜೀವನದ ದ್ಯೋತಕಗಳಾಗಿ ಕಂಡುಬರುತ್ತವೆ.

<u>**ಅಥವಾ**</u>

**ಜಂತ್ರ ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.**

ಜಯಪುರದಲ್ಲಿರುವ 'ಜಂತ್ರ ಮಂತ್ರ' ಹಳೆಯ ಕಾಲದ ಖಗೋಳವಿಜ್ಞಾನದ ಪರಿಶೀಲನಾಲಯ. 400–500 ವರ್ಷಗಳ ಪೂರ್ವದಲ್ಲಿ ಖಗೋಳಶಾಸ್ತ್ರಜ್ಞರು ಗ್ರಹ, ಸೂರ್ಯಚಂದ್ರ, ತಾರಾ ಮಂಡಲಗಳನ್ನು ಅಳೆದು, ಪರಿಶೀಲಿಸಿ ನೋಡುವ ಸಲುವಾಗಿ ಇಲ್ಲಿ ವಿಚಿತ್ರವಾದ ಸಾಧನಗಳನ್ನು ನೆಟ್ಟಿದ್ದಾರೆ. ಇಂಥ ಹತ್ತೆಂಟು ವಿಧದ ಸಾಧನಗಳ ವಿಚಿತ್ರ ರಚನೆಗಳಿವೆ. ಗಳಿಗೆಯನ್ನು ಅಳೆಯುವುದಕ್ಕೆ, ಪ್ರತಿಯೊಂದು ತಿಂಗಳಿನಲ್ಲೂ ಸೂರ್ಯ, ನಕ್ಷತ್ರಗಳ ಗತಿಯನ್ನು ಪರಿಶೀಲಿಸುವುದಕ್ಕೆ ಏನೇನೋ ಏರ್ಪಾಟುಗಳಿವೆ. ಪ್ರತಿಯೊಂದು ಸಾಧನದ ಮೇಲೂ ಅವುಗಳ ಉಪಯೋಗ ಮತ್ತು ಕಾಲವನ್ನು ಅಳೆಯುವ ರೀತಿ ಮೊದಲಾದುವನ್ನು ನಮೂದಿಸಿದೆ. ದೂರದರ್ಶಿಯ ಸಹಾಯವಿಲ್ಲದೆ ಬರಿಗಣ್ಣಿನಿಂದಲೇ ಖಗೋಳದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು, ಗಣಿತಕ್ಕೂ, ಸೂಕ್ಷ್ಮ ಪರಿಶೀಲನೆಗೂ ಹಿರಿಯರು ಸಲ್ಲಿಸಿದ ಕಾಣಿಕೆಗಳಾಗಿವೆ. ಇದು ಜಯಪುರದಲ್ಲಿರುವ 'ಜಂತ್ರ–ಮಂತ್ರ' ಖಗೋಳವಿಜ್ಞಾನ ಪರಿಶೀಲನಾಲಯದ ವಿಶೇಷತೆಯಾಗಿದೆ.

**42. ಮಾರಿದತ್ತ ರಾಜ್ಯವನ್ನು ತ್ಯಜಿಸಲು ಕಾರಣವೇನು?**

ಮಾರಿದತ್ತನು ತಳಾರನಾದ ಚಂಡಕರ್ಮನಿಗೆ ಮಾರಿಗೆ ನರಬಲಿ ಕೊಡುವುದಕ್ಕಾಗಿ ಇಬ್ಬರನ್ನು ಹಿಡಿದು ತರುವಂತೆ ಆಜ್ಞಾಪಿಸಿದನು. ಚಂಡಕರ್ಮನು ಸುದತ್ತಾಚಾರ್ಯ ಮುನಿಗಳೊಡನೆ ರಾಜಪುರ ಪಟ್ಟಣಕ್ಕೆ ಬಂದು, ಭಿಕ್ಷೆಗೆ ಹೊರಟಿದ್ದ ಎಳೆ ವಯಸ್ಸಿನ ಅಣ್ಣತಂಗಿಯರಾದ ಅಭಯರುಚಿ ಮತ್ತು ಅಭಯಮತಿಯರನ್ನು ಹಿಡಿದು ತಂದನು. ಅಭಯರುಚಿ ಮತ್ತ ಅಭಯಮತಿಯರು ನರಬಲಿ ನೀಡುವ ಚಂಡಮಾರಿ ದೇವಾಲಯದ ಭಯಂಕರ ದೃಶ್ಯವನ್ನು ಕಂಡು ಸ್ವಲ್ಪವೂ ವಿಚಲಿತರಾಗಲಿಲ್ಲ. ಅಭಯರುಚಿ ಮತ್ತು ಅಭಯಮತಿಯರ ಧೈರ್ಯ, ಸ್ಥೈರ್ಯಗಳನ್ನು ಕಂಡು ಮಾರಿದತ್ತನು ಬೆಕ್ಕಸ ಬೆರಗಾದನು. ಅಭಯರುಚಿಯು ಮಾರಿದತ್ತನಿಗೆ "ನಾನು ಸಂಕಲ್ಪಹಿಂಸೆ ಒಂದರಿಂದಲೇ ನಾನಾ ಜನ್ಮಾಂತರಗಳಲ್ಲಿ ದುಃಖವನ್ನು ಅನುಭವಿಸಿದೆನು. ಆದರೆ ನೀನು ಭಯವಿಲ್ಲದೆ ಇಷ್ಟು ದೇಹಗಳನ್ನು ಕೊಲ್ಲುತ್ತಿರುವೆ. ಇದಕ್ಕೆ ನರಕದಲ್ಲಿ ಪರಿಹಾರವನ್ನು ಪಡೆಯುವೆ. ಆದ್ದರಿಂದ ನಿನಗೆ ಉಂಟಾಗುವ ಕೇಡನ್ನು ಆಲೋಚಿಸಿ, ಕರುಣೆಯಿಂದ ತಲ್ಲಣಗೊಂಡೆನು" ಎಂದು ಹೇಳುತ್ತಾನೆ. ಈ ಮಾತುಗಳನ್ನು ಕೇಳಿ ಮಾರಿದತ್ತ ದೊರೆಯು ಹೆದರಿ ವಿಸ್ಮಯಗೊಂಡು ಉದ್ವಿಗ್ನನಾದನು. ಚಂಡಮಾರಿಯು ಪ್ರತ್ಯಕ್ಷಳಾಗಿ "ಪ್ರಜೆಗಳೆಲ್ಲರು ನನ್ನನ್ನು ಜಲ, ಗಂಧ, ಹೂಮಾಲೆ, ಅಕ್ಕಿ, ಧೂಪ, ದೀಪ, ಹವಿಸ್ಸು, ತಾಂಬೂಲ ಸಮೂಹದಿಂದ ಪೂಜಿಸುವುದು. ನನಗೆ ಜೀವಜಾತಗಳನ್ನು ಬಲಿ ಕೊಟ್ಟರೆ ಕೋಪಗೊಳ್ಳುವೆನು" ಎಂದು ಹೇಳಿದುದನ್ನು ಕೇಳಿ, ಮಾರಿದತ್ತನಿಗೆ ತಾನು ಅದುವರೆವಿಗೂ ಮಾಡಿದ ಪಾಪಕೃತ್ಯಗಳಿಗಾಗಿ ಭಯವುಂಟಾಯಿತು. ಆದ್ದರಿಂದ ಮಾರಿದತ್ತನು ಕುಸುಮದತ್ತನಿಗೆ ರಾಜ್ಯಾಧಿಕಾರವನ್ನು ನೀಡಿ ರಾಜ್ಯವನ್ನು ತ್ಯಜಿಸಿದನು.

**ಅಥವಾ**

**ಅಭಯರುಚಿ ಮತ್ತು ಮಾರಿದತ್ತರಲ್ಲಿ ಯಾರನ್ನು ಮೆಚ್ಚುವಿರಿ? ಏಕೆ?**

ಅಭಯರುಚಿ ಮತ್ತು ಮಾರಿದತ್ತರಲ್ಲಿ ಅಭಯರುಚಿಯು ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಏಕೆಂದರೆ "ಹಿಂಸೆಯು ಮಾನವನನ್ನು ದಾನವನನ್ನಾಗಿಸುತ್ತದೆ. ಹಿಂಸೆಯನ್ನು ಮಾಡುವುದರಿರಲಿ, ಹಿಂಸೆಯನ್ನು ಸಂಕಲ್ಪಿಸುವುದು ಘೋರಪಾಪ. ಇದು ಜನ್ಮಜನ್ಮಾಂತರಕ್ಕೂ ಕಾಡದೇ ಬಿಡದು. ಅಹಿಂಸೆಯೇ ಪರಮಧರ್ಮ" ಎನ್ನುವ ನಿತ್ಯಸತ್ಯವನ್ನು ತಿಳಿಸುವುದರ ಮೂಲಕ ಅಭಯರುಚಿಯು ಮಾರಿದತ್ತ ರಾಜನನ್ನು ಹಿಂಸಾಮಾರ್ಗದಿಂದ ವಿಮುಖನಾಗುವಂತೆ ಮಾಡಿ, ಮನಃಪರಿವರ್ತನೆಯನ್ನು ಮಾಡುತ್ತಾನೆ. ಮನಃಪರಿವರ್ತನೆಗೊಂಡ ಮಾರಿದತ್ತನು ಮುಂದೆ ತನಗೆ ಬರಬಹುದಾದ ನರಕವನ್ನು ನೆನೆದು, ಹೆದರಿ ಚಂಡಮಾರಿಗೆ ನರಬಲಿಯನ್ನು ನೀಡಲು ಕರೆತಂದಿದ್ದ ಜೀವರಾಶಿಗಳನ್ನು ಸೆರೆಯಿಂದ ಬಿಡಿಸುವುದರ ಮೂಲಕ ಜೀವಸಂರಕ್ಷಣೆ ಮಾಡುತ್ತಾನೆ. ದುಃಖಪರವಶನಾದ ಮಾರಿದತ್ತನು ಪ್ರಾಣಿಹಿಂಸೆ ಮಾಡುವುದರಿಂದ ಉಂಟಾಗುವ ಕಷ್ಟಗಳನ್ನು ತಿಳಿಸಿದ, ತನ್ನ ಸೋದರಿಯ ಮಕ್ಕಳನ್ನು ಒಡಲಿನಲ್ಲಿ ಇಟ್ಟುಕೊಳ್ಳುವಂತೆ ಅಪ್ಪಿಕೊಂಡು, ಬೆಚ್ಚನೆಯ ನಿಟ್ಟುಸಿರುಬಿಟ್ಟನು. ಮಾರಿದತ್ತನು ತಾನು ಅದುವರೆವಿಗೂ ಮಾಡಿದ ಪಾಪಕಾರ್ಯಗಳಿಗೆ ಭಯಗೊಂಡು, ಕುಸುಮದತ್ತನಿಗೆ ಧರಿತ್ರೀನಾಥ ಪದವಿಯನ್ನು ಕೊಟ್ಟು, ಸಂನ್ಯಾಸತ್ವದ ದೀಕ್ಷೆಯನ್ನು ಕೈಗೊಂಡನು. ಕೆಲಕಾಲ ಉಗ್ರತಪಸ್ಸನ್ನು ಮಾಡಿ, ಧ್ಯಾನ ಸಮಾಧಿಯಲ್ಲಿ ಕೊನೆಯುಸಿರೆಳೆದನು. ಮಾಡಿದ ತಪದ ಫಲವಾಗಿ ಮಾರಿದತ್ತನು ಮೂರನೆಯ ಸ್ವರ್ಗವು ನೆಲೆಯಾಗಲು, ಕಲಿಯನ್ನು ಮೂದಲಿಸುವಂತೆ ದೇವನೇ ಆದನು. ಹೀಗೆ ಅಭಯರುಚಿಯು ಮಾರಿದತ್ತನಲ್ಲಿದ್ದ ದಾನವ ಗುಣವನ್ನು ಹೋಗಲಾಡಿಸಿ ದೈವತ್ವಕ್ಕೆ ಏರಿಸುತ್ತಾನೆ. ಆದ್ದರಿಂದ ನಾನು ಅಭಯರುಚಿಯನ್ನು ಮೆಚ್ಚುತ್ತೇನೆ.

**43. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**

**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

ಬಸವಣ್ಣನವರು ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದರು. ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಮನಗಂಡು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚಗನ್ನಡದಲ್ಲಿ ತಿಳಿಸಿಕೊಟ್ಟರು. ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಿಲ್ಲ, ಒಂದು ವರ್ಗದ ಸ್ವತ್ತಲ್ಲ. ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು ಆಗಿತ್ತು.

ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ, ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ವ್ಯಾಖ್ಯಾನಿಸಿದರು. 'ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ.

**ಪ್ರಶ್ನೆಗಳು :**

**ಅ) ಧರ್ಮದ ಬಗೆಗೆ ಬಸವಣ್ಣನವರ ನಿಲುವು ಏನಾಗಿತ್ತು?**

ಬಸವಣ್ಣನವರು ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದರು. ಸಾಮಾನ್ಯ ಜನತೆಯನ್ನು ಉದ್ಧಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಮನಗಂಡು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚಗನ್ನಡದಲ್ಲಿ ತಿಳಿಸಿಕೊಟ್ಟರು. ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಿಲ್ಲ, ಒಂದು ವರ್ಗದ ಸ್ವತ್ತಲ್ಲ. ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು ಆಗಿತ್ತು.

**ಬ) ಬಸವಣ್ಣನವರು ಏಕೆ ಒಬ್ಬ ಕ್ರಾಂತಿಕಾರಿ ಎನಿಸಿಕೊಂಡಿದ್ದಾರೆ?**

ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ, ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ವ್ಯಾಖ್ಯಾನಿಸಿದರು. 'ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ.

**44. ನಿಮ್ಮನ್ನು ರಾಮನಗರ ಜಿಲ್ಲೆಯ ಹೆಬ್ಬಕೋಡಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವೀರೇಶ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಶೌಚಾಲಯವನ್ನು ನಿರ್ಮಿಸಲು ಅಗತ್ಯ ನೆರವು ನೀಡುವಂತೆ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.**

**1 * 5 = 5**

**ಅಥವಾ**

**ನಿಮ್ಮನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೀಲಾಂಬಿಕೆ' ಎಂದು ಭಾವಿಸಿಕೊಂಡು, ವಿಜಯ ನಗರ ಜಿಲ್ಲೆಯ ಹೂವಿನ ಹಡಗಲಿ ನಿವಾಸಿಯಾದ ನಿಮ್ಮ ಗೆಳತಿ 'ಗಂಗಾಬಿಕೆ' ಎಂಬುವವಳನ್ನು ನಿಮ್ಮ ಶಾಲೆಯಲ್ಲಿ ನಡೆಯುವ ಕ್ರೀಡೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.**

| | |
|---|---|
| ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| ಪತ್ರದ ಒಡಲು – ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| ಭಾಷಾ ಶೈಲಿ, ಪದಬಂಧ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |

**ಅಥವಾ**

| | |
|---|---|
| ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| ಪತ್ರದ ಒಡಲು – ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| ಭಾಷಾ ಶೈಲಿ, ಪದಬಂಧ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |

1. **ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**


**1 * 5 = 5**

- **ನಿರುದ್ಯೋಗ ಸಮಸ್ಯೆ**
- **ಬಾಲಕಾರ್ಮಿಕ ಪದ್ಧತಿ ನಿರ್ಮೂಲನ ಕಾರ್ಯಕ್ರಮದ ಮಹತ್ತ್ವ**

| | |
|---|---|
| ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ | 2 ಅಂಕಗಳು |
| ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| ಭಾಷಾ ಶೈಲಿ, ಪದಬಂಧ | 1 ಅಂಕ |
| ಒಟ್ಟು | 5 ಅಂಕಗಳು |

**---- 0 ----**

# ನಿಮ್ಮ ಶಾಲೆಯ ಉತ್ತಮ ಫಲಿತಾಂಶಕ್ಕಾಗಿ ನಮ್ಮ ಪ್ರಕಟಣೆಗಳು

















ನಿಮ್ಮ ಪ್ರೀತಿಯ ಗೆಳೆಯ

## ಬಿ. ರವೀಶ್ ಕುಮಾರ್

**ನಿವೃತ್ತ ಕನ್ನಡ ಭಾಷಾ ಶಿಕ್ಷಕರು**

**ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಕನ್ನಡ)**

**# 2905, ಹೊನ್ನಸಿರಿ, 3 ನೆಯ ತಿರುವು,**

**'ಎಫ್' ಬ್ಲಾಕ್, ಕನಕದಾಸನಗರ, ಮೈಸೂರು – 570033**

**ಸಂಚಾರಿವಾಣಿ ಸಂಖ್ಯೆ : 9448958498**